ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,

ಪೊನ್ನಂಪೇಟೆ

**ಸಿ.ಸಿ. ನಂ. 729/2024** ಪ್ರಾ.ಸಾ **–6**

ಚಾ.ಸಾ **– 6**

ದಿನಾಂಕಃ **13.01.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | : | ಚಂದ್ರಶೇಖರ್ |
| ತಂದೆಯ ಹೆಸರು | : | ಕುಮಾರ |
| ವಯಸ್ಸು | : | 39 ವರ್ಷ |
| ಉದ್ಯೋಗ | : | ಖಾಸಗಿ ಕೆಲಸ |
| ವಾಸ ಸ್ಥಳ | : | ಕೃಷ್ಣ ನಗರ, ಪೊನ್ನಂಪೇಟೆ |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ಸಾಕ್ಷಿಯು ನಿ ಪಿ 3 ಮತ್ತು 6 ಮಹಜರ್ ಗಳಲ್ಲಿ ಸಹಿ ನೋಡಿ ಗುರುತಿಸಿದ್ದು, ಸಹಿಯನ್ನು ನಿ. ಪಿ. 3(ಬಿ) ಮತ್ತು 6(ಎ) ಎಂದು ಗುರುತಿಸಲಾಯಿತು. ಸದರಿ ಮಹಜರ್‌ಗಳಿಗೆ ದಿ. 24.06.2023 ರಂದು ಕಾನೂರು ಜಂಕ್ಷನ್ ನಲ್ಲಿರುವ ಚಾಸಾ 1 ರವರ ಮನೆಯ ಬಳಿ ಕೃತ್ಯ ಸ್ಥಳದ ಮಹಜರ್ ಗೆ ಸಹಿ ಮಾಡಿರುತ್ತೇನೆ. ಸದರಿ ಮಹಜರ್ ಗಳನ್ನು Facebook, whatsapp ಗಳಲ್ಲಿ message ಮಾಡುವ ವಿಚಾರವಾಗಿ ಮಹಜರ್‌ಗೆ ಸಹಿ ಮಾಡಿರುತ್ತೇನೆ. ಮಹಜರ್ ಅನ್ನು 11.45 ರಿಂದ 01.00 ಗಂಟೆ ತನಕ ಮಾಡಿರುತ್ತಾರೆ. ಅದೇ ದಿನ ಪೊ. ಠಾಣೆಯಲ್ಲಿ ಫೋನ್, message ಗಳ screen shot ಗಳನ್ನು ಪೊಲೀಸರಿಗೆ ಕೊಡುವ ಸಮಯದಲ್ಲಿ ಮಹಜರ್ ಕ್ರಮ ಜರುಗಿಸಿದ್ದು ಆಗ ಸಹಿ ಮಾಡಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ, ಮಾನ್ಯ ಎಪಿಪಿರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)**

ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ನಿ ಪಿ 4 ಮತ್ತು 5 ಕೃತ್ಯ ಸ್ಥಳದ ಮಹಜರ್ ಸಮಯದಲ್ಲಿ ತೆಗೆದ ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ನಿ ಪಿ 7 ಮತ್ತು 8 ಅಮಾನತು ಮಹಜರ್ ಸಮಯದಲ್ಲಿ ತೆಗೆದ

ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ನಿ ಪಿ 9 ರಿಂದ 29 ರ ವರೆಗಿನ screen shot ಗಳನ್ನು ನೋಡಿ ಗುರುತಿಸಿರುತ್ತಾರೆ. ಈ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡರು. ದಿ. 24.06.2023 ರಂದುಕ ಕೃತ್ಯ ಸ್ಥಳದ ಮಹಜರ್ ಅನ್ನು ಬೆ. 10.30 ರಿಂದ 11.30 ತನಕ ಮಾಡಿದರು ಎಂದರೆ ಸರಿ. ಅದೇ ರೀತಿ ಅಮಾನತು ಮಹಜರ್ ಅನ್ನು 11.45 ರಿಂದ 12.45 ರತನಕ ಠಾಣೆಯಲ್ಲಿ ಮಾಡಿದರು ಎಂದರೆ ಸರಿ. ಆ ಸಮಯದಲ್ಲಿ ಚಾಸಾ 1 ರವರಿಂದ ರೆಡ್ಮಿ ಮೊಬೈಲ್ ಅನ್ನು ಪೊಲೀಸರು ವಶಪಡಿಸಿಕೊಂಡರು ಎಂದರೆ ಸರಿ. ಮು. ಮಾ 1 ಅನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಂ. ಹೆಚ್. ಎನ್. ವಕೀಲರಿಂದಃ</u>

ಮಹಜರ್‌ಗಳಲ್ಲಿ ಬರೆದಿರುವ ವಿಚಾರಗಳು ಎಲ್ಲ ಗೊತ್ತಿಲ್ಲ, ಆದರೆ ಮೇಲೆ ಹೇಳಿದಂತೆ Facebook, Whats app ಗಳ ಬಗ್ಗೆ ಆಗಿರುತ್ತದೆ. ನೌಶದ್ ಚಾಸಾ 1 ರವರಿಗೆ ಕಳುಹಿಸಿರುವ message ಗಳಾಗಿದ್ದು ನಾನು ಆ message ಗಳನ್ನು ನೋಡಿರುತ್ತೇನೆ. ಸ್ಥಳ ಮಹಜರ್‌ನ ಚೆಕ್ಕು ಬಂದಿ ಹೇಳಲಾಗುವುದಿಲ್ಲ. ಯಾವುದೇ message ಗಳನ್ನು ನಾನು ಓದಿಲ್ಲ, ನನ್ನ ಸಮಕ್ಷಮ ಮಹಜರ್ ಆಗಿರುವುದಿಲ್ಲ, ಚಾಸಾ 1 ರವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮನೆ ಚಾಸಾ 1 ರವರ ಪಕ್ಕದಲ್ಲಿದ್ದು ಸ್ಥಳದಲ್ಲಿ ಸಹಿ ಮಾಡಿರುತ್ತೇನೆ, ಠಾಣೆಯಲ್ಲಿ ಮಾಡಿರುವುದಿಲ್ಲ. ದಾಖಲೆಗಳು ಸೃಷ್ಟಿತ ದಾಖಲೆಗಳು ಎಂದರೆ ಸರಿಯಲ್ಲ. ಆರೋಪಿಗೂ, ಈ message ಗಳಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮು. ಮಾ 1 ಮೊಬೈಲ್ ಅನ್ನು ಬಣ್ಣದ ಆಧಾರ ಗುರುತಿಸಲು ಆಗುವುದಿಲ್ಲ, ಮತ್ತು ಯಾವ ಕಂಪನಿಯದ್ದು ಎಂದು ಗೊತ್ತಿಲ್ಲ. ಮು. ಮಾ 1 ಯಾರದ್ದು ಎಂದು ಗೊತ್ತಿಲ್ಲ, ಆದರೆ ಚಾಸಾ 1 ರವರಿಂದ ಪೊಲೀಸರು ಅದನ್ನು ಪಡೆದರು.

<u>ಮರು ವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

**sd/-**
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ